ರಾಜ್ಯದ ಕೃಷಿ ಇಲಾಖೆಯ ಅಂದಾಜಿನಂತೆ ಮಂಡ್ಯ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಸುಮಾರು 31 ಲಕ್ಷ ಮೆಟ್ರಿಕ್ ಟನ್ ಕಬ್ಬು ಉತ್ಪಾದನೆಯಾಗುವ ಅಂದಾಜು ಇರುತ್ತದೆ. ಈ ಜಿಲ್ಲೆಯಲ್ಲಿ ಮೂರು ಸಕ್ಕರೆ ಕಾರ್ಖಾನೆಗಳು ಸ್ಥಾಪಿತವಾಗಿದ್ದು, ಇವುಗಳ ಒಟ್ಟು ಕಬ್ಬು ಅರೆಯುವ ಸಾಮರ್ಥ್ಯ ದಿನಂಪ್ರತಿ 10,500 ಮೆಟ್ರಿಕ್ ಟನ್‌ಗಳಾಗಿದ್ದು ಈ ಕಾರ್ಖಾನೆಗಳು ಪೂರ್ಣ ಹಂಗಾಮಿನಲ್ಲಿ ಸುಮಾರು 16 ಲಕ್ಷ ಮೆಟ್ರಿಕ್ ಟನ್ ಕಬ್ಬು ಅರೆಯುವ ನಿರೀಕ್ಷೆ ಇರುತ್ತದೆ. ಈಗಾಗಲೇ ಈ ಮೂರು ಕಾರ್ಖಾನೆಗಳು ಕಾರ್ಯಾರಂಭ ಮಾಡಿವೆ.

2. ಇದಲ್ಲದೆ, ಜಿಲ್ಲೆಯಲ್ಲಿ ಸುಮಾರು 6 ಖಂಡಸಾರಿ ಘಟಕಗಳಿದ್ದು ಈ ಘಟಕಗಳು ಸುಮಾರು 2.5 ಲಕ್ಷ ಮೆಟ್ರಿಕ್ ಕಬ್ಬು ಅರೆಯುವ ಅಂದಾಜಿರುತ್ತದೆ. ಇವುಗಳ ಜೊತೆಗೆ ಈ ಜಿಲ್ಲೆಯಲ್ಲಿ ಸುಮಾರು 2500 ಕ್ಕೂ ಹೆಚ್ಚು ಬೆಲ್ಲದ ಗಾಣಗಳಿದ್ದು, ಪ್ರತಿ ಗಾಣವು ದಿನಂಪ್ರತಿ 5 ರಿಂದ 10 ಟನ್ ಕಬ್ಬು ಅರೆಯುವ ಸಾಮರ್ಥ್ಯ ಪಡೆದಿದ್ದು ಒಟ್ಟಾರೆ ಸುಮಾರು 9 ಲಕ್ಷ ಮೆಟ್ರಿಕ್ ಟನ್ ಕಬ್ಬನ್ನು ಅರೆಯುವ ಅಂದಾಜಿದೆ.

3. ಕಳೆದ ಸಾಲಿಗಿಂತ ಈ ಸಾಲಿನಲ್ಲಿ ಕಬ್ಬಿನ ಬೆಳೆ ಜಾಸ್ತಿಯಾಗಿರುವುದರಿಂದ ಜಿಲ್ಲೆಯ ಹೆಚ್ಚುವರಿ ಕಬ್ಬನ್ನು ಎತ್ತುವಳಿ ಮಾಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿರುತ್ತದೆ. ಮೊದಲನೆಯದಾಗಿ ಪಕ್ಕದ ಹಾಸನ ಜಿಲ್ಲೆಯಲ್ಲಿರುವ ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆಯ ಕೋರಿಕೆಯಂತೆ ಸುಮಾರು 60 ಸಾವಿರ ಟನ್ ಕಬ್ಬನ್ನು ಮಂಡ್ಯ ಜಿಲ್ಲೆಯಿಂದ ಪಡೆಯಲು ಅನುಮತಿ ನೀಡಲಾಗಿದೆ. ಪಕ್ಕದ ಜಿಲ್ಲೆಗಳ ಬೇರೆ ಯಾವುದೇ ಕಾರ್ಖಾನೆಗಳು ಮಂಡ್ಯ ಜಿಲ್ಲೆಯಿಂದ ಕಬ್ಬು ಖರೀದಿಸಲು ಮುಂದೆ ಬಂದಿರುವುದಿಲ್ಲ. ಎರಡನೆಯದಾಗಿ ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯ ಕಾರ್ಯ ಕ್ಷೇತ್ರದಲ್ಲಿ ಹೆಚ್ಚುವರಿ ಇರುವ ಕಬ್ಬಿನ ಸದರಿ ಕಾರ್ಖಾನೆಯು ಮಾಹಿತಿ ನೀಡಿದ್ದರ ಮೇರೆಗೆ ಒಟ್ಟು 80,000 ಮೆಟ್ರಿಕ್ ಟನ್ ಕಬ್ಬನ್ನು ತಮಿಳು ನಾಡಿನ ಬನ್ನಾರಿ ಅಮ್ಮನ್ ಶುಗರ್ಸ್ ಮತ್ತು ಪೊನ್ನಿ ಶುಗರ್ಸ್ ರವರು ಈ ಕಾರ್ಯಕ್ಷೇತ್ರದಿಂದ ಹೆಚ್ಚುವರಿ ಇರುವ ಮತ್ತು ಕಾರ್ಖಾನೆಗೆ ಒಪ್ಪಿಗೆಯಾಗದ ಕಬ್ಬನ್ನು ಖರೀದಿಸಲು ಈಗಾಗಲೇ ಅನುಮತಿ ನೀಡಲಾಗಿದೆ ಮತ್ತು ಕಬ್ಬು ಎತ್ತುವಳಿ ಕಾರ್ಯ ನಡೆಯುತ್ತಿದೆ.

4. ಪಕ್ಕದ ಜಿಲ್ಲೆಗಳ ಕಾರ್ಖಾನೆಗಳಿಂದ ಮಂಡ್ಯ ಜಿಲ್ಲೆಯ ಹೆಚ್ಚುವರಿ ಕಬ್ಬನ್ನು ಖರೀದಿಸುವಂಥ ಬೇಡಿಕೆ ಬಂದರೆ ವಿಳಂಬವಿಲ್ಲದೆ ಸರ್ಕಾರವು ಅನುಮತಿ ನೀಡಲು ಕ್ರಮ ಕೈಗೊಳ್ಳುವುದು. ಜಿಲ್ಲೆಯ ಮೂರು ಕಾರ್ಖಾನೆಗಳ ಬೇಡಿಕೆಯನ್ನು ಹಾಗೂ ಜಿಲ್ಲೆಯಲ್ಲಿನ ಹೆಚ್ಚುವರಿ ಕಬ್ಬಿನ ಪ್ರಮಾಣವನ್ನು ಪರಿಗಣಿಸಿ ಕಬ್ಬು ಅರೆಯುವ ಇತರೆ ಘಟಕಗಳ ಪರವಾನಿಗೆಯ ಅವಧಿಯನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು.

5. 1991-92ನೇ ಸಾಲಿಗೆ ಸಂಬಂಧಿಸಿದಂತೆ ರಾಜ್ಯ ಸಲಹಾ ಕಬ್ಬಿನ ಬೆಲೆಯನ್ನು ಅತಿ ಶೀಘ್ರವಾಗಿ ಪ್ರಕಟಿಸಲಾಗುವುದು.

3) ಸದರಿ ಶೈಕ್ಷಣಿಕ ವರ್ಷದಲ್ಲಿ ಅರ್ಹತೆಯ ಆಧಾರದ ಮೇರೆಗೆ ಮೊದಲ ವರ್ಷದ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಅಂಕಿ ಅಂಶಗಳ ವಿವರ ಒದಗಿಸುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಉಪಾಧ್ಯಕ್ಷೆಯವರೆ, ಸದರಿ ಶೈಕ್ಷಣಿಕ ವರ್ಷದಲ್ಲಿ ಅರ್ಹತೆಯ ಆಧಾರದ ಮೇರೆಗೆ ಮೋದಲ ವರ್ಷದ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಪಡೆದ ಅಭ್ಯರ್ಥಿಗಳ ಸಂಖ್ಯೆ ಎಷ್ಟು? ಕಳೆದ ವರ್ಷ

ಪ್ರವೇಶ ಪಡೆದವರ ಸಂಖ್ಯೆ ಎಷ್ಟು? ವರ್ಷದಿಂದ ವರ್ಷಕ್ಕೆ ಸರ್ಕಾರಿ ಕೋಟಾ ಇದು ಹೆಚ್ಚಾಗಬೇಕಿತ್ತಲ್ಲವೆ? ಹಾಗೆ, ಆಗಿದೆಯೇ? ಇಲ್ಲವಾದಲ್ಲಿ ಕಡಿಮೆ ಆಗಿರಲು ಕಾರಣವೇನು? ಕಡಿಮೆ ಆಗಿದ್ದಲ್ಲಿ ಖಾಸಗೀ ಕಾಲೇಜುಗಳಲ್ಲಿ ಕಡಿಮೆ ಏನಾದರೂ ಆಗಿದೆಯೋ? ವಿದ್ಯಾರ್ಥಿಗಳಿಗೆ ತಪ್ಪಿರಬಹುದಾದ ಅವಕಾಶ ಸರಿದೂಗಿಸಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) : ಮಾನ್ಯ ಉಪಾಧ್ಯಕ್ಷೀಣಿಯವರೆ, ಮಾನ್ಯ ಆರೋಗ್ಯ ಸಚಿವರ ಪರವಾಗಿ ಈ ಹೇಳಿಕೆಯನ್ನು ಮಾಡಬಯಸುತ್ತೇನೆ.

ಅರ್ಹತೆ ಆಧಾರದ ಮೇಲೆ ಮೊದಲ ವರ್ಷದ ವೈದ್ಯಕೀಯ ಶಿಕ್ಷಣದ ಪ್ರವೇಶಕ್ಕೆ ನಡೆದ ಅಂತಿಮ ಸಂದರ್ಶನ ಕಾರ್ಯಕ್ರಮ 6-9-91ರಂದು ಮುಕ್ತಾಯಗೊಂಡಿದ್ದು, ಇಂದು ಅಥವಾ ನಾಳೆ ವಿದ್ಯಾರ್ಥಿಗಳ ಆಯ್ಕೆ ಪಟ್ಟಿಯನ್ನು ಬಿಡುಗಡೆ ಮಾಡಲಾಗುವುದು. ಅಂಕಿ ಅಂಶಗಳ ವಿವರ ಈ ರೀತಿ ಇದೆ. ಬೆಂಗಳೂರು 200 ಸೀಟುಗಳು, ಮೈಸೂರು 175, ಹುಬ್ಬಳ್ಳಿ 130, ಬಳ್ಳಾರಿ 130 ಸೀಟುಗಳು.

4) ಬೆಂಗಳೂರು ವರ್ತುಲ ರಸ್ತೆಯ ನಿರ್ಮಾಣ

SRI SADATH ALI KHAN : The Hon'ble Minister for Public Works may be pleased to state that there is a proposal to construct the Ring Road around Bangalore City to regulate the heavy vehicular traffic coming from outside the City.

What is the total estimated cost of the length of the Circular Road constructed so far?

Amount spent sofar?

When the Circular Road will be completed? Whether there was a proposal to construct a direct road between Bangalore and Mysore in the P.W.D. Department; Whether Official tenders were to be called for from private agencies to construct the road;

What is the position?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷೀಣಿಯವರೆ, ಈ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಕಾರ್ಯಕ್ರಮ ಕೈಗೊಳ್ಳಲಾಗುವುದು.

5) ಸೀಮಿತ ಆದಾಯವನ್ನು ಹೊಂದಿರುವ ಮಂಡಲ ಪಂಚಾಯಿತಿಗಳಿಗೆ ಸರ್ಕಾರದ ವಿಶೇಷ ಅನುದಾನ

ಶ್ರೀ ವಸಂತ ವಿ. ಸಾಲಿಯಾನ : ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿರುವ ಹೆಚ್ಚಿನ ಮಂಡಲ ಪಂಚಾಯಿತಿಗಳು ಸೀಮಿತ ಆದಾಯವನ್ನು ಹೊಂದಿದ್ದು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಿಸಲು ಕಷ್ಟವಾಗುತ್ತಿದೆ. ಅಂಥ ಕಡಿಮೆ ಆದಾಯವಿರುವ ಮಂಡಲ ಪಂಚಾಯತ್‌ಗಳಿಗೆ ಸರ್ಕಾರ ವಿಶೇಷ ಅನುದಾನಗಳನ್ನು ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.